- ಘೋಷಿಸಿರುವುದಿಲ್ಲ.
  ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಡಿಕೆ ಬೆಳೆಗೆ ಕೊಳೆರೋಗದಿಂದ ಆದ ನಷ್ಟವನ್ನು ಅಂದಾಜಿಸಲು ಗ್ರಾಮವಾರು ತಂಡಗಳನ್ನು ರಚಿಸಿದ್ದು ಸಮೀಕ್ಷಾ ಕಾರ್ಯ ಪ್ರಗತಿಯಲ್ಲಿರುತ್ತದೆ.
- Not announced.
  Villagewise teams are formed in Dakshina Kannada district to estimate the loss due to Koleroga disease. The survey is in progress.
- ಇಲ್ಲ.
- No.
- ಜಿಲ್ಲಾಡಳಿತ ಈ ವಿಷಯವನ್ನು ಪರಿಶೀಲಿಸುತ್ತಿದೆ.
- District Administration is examining this issue.

ಇಥ್ರೆಲ್ ಬಳಕೆ ನಿಷೇಧದ ಕುರಿತು

1040 (52) ಶ್ರೀ ವಸಂತ ಬಂಗೇರ ಕೆ. (ಬೆಳ್ತಂಗಡಿ) : ಮಾನ್ಯ ತೋಟಗಾರಿಕೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಳೆಕಾಯಿ ಇತ್ಯಾದಿಗಳನ್ನು ಹಣ್ಣು ಮಾಡಲು ಉಪಯೋಗಿಸುವ ಇ.ಟಿ.ಹೆಚ್.ಆರ್.ಇ.ಎಲ್ (ಇಥ್ರೆಲ್)ನ್ನು ಮಹಾರಾಷ್ಟ್ರದಲ್ಲಿ ಕೆಲವರ್ಷಗಳ ಹಿಂದೆ ನಿಷೇಧಿಸಲಾಗಿದೆ, ಕರ್ನಾಟಕದಲ್ಲಿ ಇದನ್ನು ನಿಷೇಧಿಸಲಾಗಿದೆಯೇ;

ಆ) ಹೌದಾದಲ್ಲಿ, ಯಾವಾಗ ನಿಷೇಧಿಸಲಾಗಿದೆ;

ಇ) ಇಲ್ಲವಾದಲ್ಲಿ, ಆರೋಗ್ಯಕ್ಕೆ ಮಾರಕವಾಗಿರುವ ಈ ಔಷಧಿಯನ್ನು ಯಾಕೆ ನಿಷೇಧಿಸಿರುವುದಿಲ್ಲ. ನಿಷೇದ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಶ್ರೀ ಎಸ್.ಎ. ರವೀಂದ್ರನಾಥ್ (ತೋಟಗಾರಿಕೆ ಮತ್ತು ಸಕ್ಕರೆ ಸಚಿವರು) :

ಅ) ಇಲ್ಲ.

No.

ಆ) ಇದನ್ನು ನಿಷೇಧಿಸುವುದಕ್ಕೆ ಯಾವುದೇ ಸಕಾರಣಗಳು ಇರುವುದಿಲ್ಲ.

There are no compelling reasons for banning this chemical.

ಇ) ಇಥ್ರೆಲ್ ರಸಾಯನವನ್ನು ವಿಶ್ವದಾದ್ಯಂತ ವಿವಿಧ ಜಾತಿಯ ಹಣ್ಣುಗಳನ್ನು ಕೃತಕವಾಗಿ ಮಾಗಿಸಲು ವೈಜ್ಞಾನಿಕವಾಗಿ ಶಿಫಾರಸ್ಸು ಮಾಡಲಾಗಿರುತ್ತದೆ. ಇಥಿಲೀನ್ ಎಂಬುದು ಹಣ್ಣುಗಳು ಮಾಗುವಾಗ ಆಯಾ ಹಣ್ಣುಗಳಲ್ಲಿ, ಆಂತರಿಕವಾಗಿ, ಸಹಜವಾಗಿ, ಉತ್ಪತ್ತಿ ಆಗಿ, ಹಣ್ಣುಗಳನ್ನು ಮಾಗಿಸುವ ಪ್ರಕ್ರಿಯೆಯನ್ನು ಚಾಲನೆಗೊಳಿಸುವ ಒಂದು ಸಹಜ ಜೈವಿಕ ಹಾರ್ಮೋನ್ ಆಗಿರುತ್ತದೆ. ಈ ಹಾರ್ಮೋನ್‌ದ ಒಂದು ರೂಪವೆ ಇಥ್ರೆಲ್ ಆಗಿರುತ್ತದೆ.

ಆದ್ದರಿಂದ, ಇಥ್ರಿಲ್ ಅನ್ನು ನಿಷೇಧಿಸುವುದಕ್ಕೆ ಯಾವುದೇ ಸಕಾರಣ ಗಳಿರುವುದಿಲ್ಲ, ಹಾಗೂ ಇದನ್ನು ನಿಷೇಧಿಸುವುದಕ್ಕೆ ಯಾರೂ ಒತ್ತಾಯ ತಂದಿರುವುದಿಲ್ಲ. ಈ ಕಾರಣಗಳಿಂದ ಈ ರಸಾಯನವನ್ನು ನಿಷೇಧಿಸಲು ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

The chemical Ethrel is scientifically recommended for artificial ripening of different types of fruits all over the world. Ethylene is a biological harmone that is naturally produced inside the fruits during the process of ripening and it is a natural chemical which initiates the process of ripening of fruits. Ethrel is one of the forma of this chemical.

Hence, there are no compeling reasons for banning ethrel and there are no request from any body to ban Ethrel. Owing to these reasons, proposal regarding banning of this chemical is not under the consideration of the Government.